ಕರ್ನಾಟಕ ಸರ್ಕಾರ

ರಾಷ್ಟ್ರೀಯ ಸೇವಾ ಯೋಜನಾ ಕೋಶ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12

ಸಂಖ್ಯೆ:ಪಪೂಶಿಇ/ರಾಸೇಯೋ/ವಿ.ಅ.ನೇ/2019-20 ದಿನಾಂಕ:18.10.2019

ಜ್ಞಾಪನ :

ವಿಷಯ: ಪದವಿ ಪೂರ್ವ ಶಿಕ್ಷಣ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನೆಯ ವಿಭಾಗಗಳಿಗೆ ವಿಭಾಗೀಯ ಅಧಿಕಾರಿಗಳನ್ನು ನೇಮಕ ಮಾಡಿರುವ ಬಗ್ಗೆ.

ಉಲ್ಲೇಖ:1.ರಾಜ್ಯ ಎನ್.ಎಸ್.ಎಸ್ ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಎನ್.ಎಸ್.ಎಸ್ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯವರ ಪತ್ರ ಸಂಖ್ಯೆ:ಯುಸೇಇ/ರಾಸೇಯೋ/13/2019-20/297 ದಿನಾಂಕ:19.08.2019.

2. ಸಂಖ್ಯೆ:ಪಪೂಶಿಇ/ರಾಸೇಯೋ/05/2019-20 ದಿನಾಂಕ:21.08.2019

3. ಎನ್.ಎಸ್.ಎಸ್ ರಾಜ್ಯಮಟ್ಟದ ಸಲಹಾ ಸಮಿತಿ ಸಭೆ. ದಿನಾಂಕ:26.09.2019

****

ಪದವಿ ಪೂರ್ವ ಶಿಕ್ಷಣ ಇಲಾಖೆ ರಾಷ್ಟ್ರೀಯ ಸೇವಾ ಯೋಜನಾ ಕೋಶದಲ್ಲಿ ಒಟ್ಟು 800 ಘಟಕಗಳು ಮಂಜೂರಾಗಿದ್ದು, 80000 ವಿದ್ಯಾರ್ಥಿಗಳು ಎನ್.ಎಸ್.ಎಸ್ ಸ್ವಯಂಸೇವಕ/ಸ್ವಯಂಸೇವಕಿಯರಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಉಲ್ಲೇಖ-1, 2 ಮತ್ತು 3ರಂತೆ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಚಟುವಟಿಕೆಗಳನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಲು ಮತ್ತು ಎಲ್ಲಾ ಘಟಕಗಳನ್ನು ಸಕ್ರಿಯವಾಗಿಸಿ, ವಿದ್ಯಾರ್ಥಿಗಳು, ಕಾರ್ಯಕ್ರಮಾಧಿಕಾರಿಗಳನ್ನು ಪ್ರೇರಿಪಿಸುವ ಉದ್ದೇಶದಿಂದ ರಾಜ್ಯದ 800 ಎನ್.ಎಸ್.ಎಸ್ ಘಟಕಗಳುಳ್ಳ 9 ವಿಭಾಗಗಳಿಗೆ ಈ ಕೆಳಕಂಡ ವಿವರಗಳಂತೆ ಉಪನ್ಯಾಸಕರುಗಳನ್ನು ಎನ್.ಎಸ್.ಎಸ್ ವಿಭಾಗೀಯ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿರುತ್ತದೆ.

ಎನ್.ಎಸ್.ಎಸ್ ವಿಭಾಗೀಯ ಅಧಿಕಾರಿಗಳ ವಿವರ:

| ಕ್ರ.ಸ | ವಿಭಾಗ | ಜಿಲ್ಲೆಗಳು | ಅಧಿಕಾರಿ ಹೆಸರು | ಅಧಿಕಾರಿ ಕಾಲೇಜು ವಿಳಾಸ |
|---|---|---|---|---|
| 1 | 2 | 3 | 4 | 5 |
| 1 | ಬೆಂಗಳೂರು | ಬೆಂಗಳೂರು(ಉತ್ತರ, ದಕ್ಷಿಣ ಮತ್ತು ಗ್ರಾಮಾಂತರ) ಕೋಲಾರ, ಚಿಕ್ಕಬಳ್ಳಾಪುರ ರಾಮನಗರ, | ಮಂಜುನಾಥ.ಪಿ | ಸ.ಪ.ಪೂ.ಕಾಲೇಜು, ಹೆಬ್ಬಾಳ, ಬೆಂಗಳೂರು ಉತ್ತರ ಜಿಲ್ಲೆ |
| 2 | ಬೆಳಗಾಂ | ಬೆಳಗಾಂ, ಧಾರವಾಡ, ಉತ್ತರಕನ್ನಡ ಮತ್ತು ಹಾವೇರಿ. | ರವಿಕುಮಾರ ಅಂಬೋರೆ | ಸ.ಪ.ಪೂ.ಕಾಲೇಜು, ಬಸವೇಶ್ವರನಗರ, ಸಿ ಬ್ಲಾಕ್, ಹಾವೇರಿ. |
| 3 | ಕಲಬುರಗಿ | ಕಲಬುರಗಿ, ಬೀದರ್ ಮತ್ತು ಯಾದಗಿರಿ | ಡಾ.ಚಂದ್ರಶೇಖರ್ | ಸ.ಪ.ಪೂ.ಕಾಲೇಜು, ರೇವಗಿ, ಕಲಬುರಗಿ ಜಿಲ್ಲೆ |
| 4 | ಬಿಜಾಪುರ | ಬಿಜಾಪುರ, ಗದಗ, ಬಾಗಲಕೋಟೆ | ಎಂ.ಎಸ್.ಮುಲ್ಲಾ | ಸ.ಪ.ಪೂ.ಕಾಲೇಜು, ಗದಗ |
| 5 | ದಾವಣಗೆರೆ | ದಾವಣಗೆರೆ, ಚಿತ್ರದುರ್ಗ ಮತ್ತು ತುಮಕೂರು | ಪ್ರದೀಪ್.ಬಿ.ವಿ | ಸ.ಪ.ಪೂ.ಕಾಲೇಜು, ಶ್ರೀರಾಂಪುರ, ಚಿತ್ರದುರ್ಗ ಜಿಲ್ಲೆ. |
| 6 | ಹಾಸನ | ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ | ಹರೀಶ್.ಎಂ.ಆರ್ | ಬಾಲಕೀಯರ ಸ.ಪ.ಪೂ.ಕಾಲೇಜು, ಅರಕಲಗೂಡು, ಹಾಸನ ಜಿಲ್ಲೆ |

| | | | | |
|---|---|---|---|---|
| 7 | ಬಳ್ಳಾರಿ | ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ | ಬಸಪ್ಪ ಎನ್ | ಸ.ಪ.ಪೂ.ಕಾಲೇಜು, ಕೆಸರಹಟ್ಟಿ, ಕೊಪ್ಪಳ ಜಿಲ್ಲೆ |
| 8 | ಮಂಗಳೂರು | ಮಂಗಳೂರು, ಉಡುಪಿ ಮತ್ತು ಕೊಡಗು | ಸವಿತ. ಶೈ | ಸ.ಪ.ಪೂ.ಕಾಲೇಜು, ಬ್ರಹ್ಮಾವರ, ಉಡುಪಿ ಜಿಲ್ಲೆ |
| 9 | ಮೈಸೂರು | ಮೈಸೂರು, ಮಂಡ್ಯ ಮತ್ತು ಚಾಮರಾಜನಗರ | ಟಿ.ಕೆ.ರವಿ | ಬಾಲಕರ ಸ.ಪ.ಪೂ.ಕಾಲೇಜು, ನಂಜನಗೂಡು, ಮೈಸೂರು ಜಿಲ್ಲೆ |

ಮೇಲ್ಕಂಡ ವಿವರಗಳಂತೆ ಪದವಿ ಪೂರ್ವ ಶಿಕ್ಷಣ ಇಲಾಖೆ ರಾಷ್ಟ್ರೀಯ ಸೇವಾ ಯೋಜನೆಯ 9 ವಿಭಾಗಗಳಿಗೆ ನೇಮಕಗೊಂಡಿರುವ ವಿಭಾಗೀಯ ಅಧಿಕಾರಿಗಳು ವಾರದಲ್ಲಿ ಕಡೆಯ 3 ದಿನಗಳು (ಗುರುವಾರ, ಶುಕ್ರವಾರ, ಶನಿವಾರ) ಎನ್.ಎಸ್.ಎಸ್ ವಿಭಾಗೀಯ ಅಧಿಕಾರಿಗಳಾಗಿ ಅವರುಗಳಿಗೆ ನಿಯೋಜಿಸಿಯವ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುವಂತೆ ಮತ್ತು ಉಳಿದ 3 ದಿನಗಳು ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುವಂತೆ ಆದೇಶಿಸಿದೆ.

ಬೆಂಗಳೂರು ವಿಭಾಗದ ವಿಭಾಗ ಅಧಿಕಾರಿಗಳು ಕೇಂದ್ರ ಕಛೇರಿಯ ಎನ್.ಎಸ್.ಎಸ್ ಕಛೇರಿಯಲ್ಲಿ 3 ದಿನಗಳು (ಗುರುವಾರ, ಶುಕ್ರವಾರ, ಶನಿವಾರ) ಎನ್.ಎಸ್.ಎಸ್ ಕಾರ್ಯಚಟುವಟಿಕೆಗಳನ್ನು ನಿರ್ವಹಣೆ ಮಾಡಲು ನಿಯೋಜಿಸಿ ಆದೇಶಿಸಿದೆ.

ಸದರಿ ವಿಭಾಗ ಅಧಿಕಾರಿಗಳು ತಮ್ಮ ವಿಭಾಗದ ಜಿಲ್ಲೆಗಳಿಗೆ ಸಂಬಂಧಿಸಿದ ಎನ್.ಎಸ್.ಎಸ್ ಕಾರ್ಯಚಟುವಟಿಕೆಗಳನ್ನು ತಮ್ಮ ಕಾಲೇಜಿನಲ್ಲಿಯೇ ಎನ್.ಎಸ್.ಎಸ್ ಕಛೇರಿ ಮಾಡಿಕೊಂಡು ನಿರ್ವಹಣೆ ಮಾಡುವುದು ಹಾಗೂ ವಿಭಾಗೀಯ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿರುವ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರುಗಳು ಎನ್.ಎಸ್.ಎಸ್ ಚಟುವಟಿಕೆಗಳ ಕಾರ್ಯ ನಿರ್ವಹಣೆಯನ್ನು ಸೂಕ್ತವಾಗಿ ನಿರ್ವಹಿಸಲು ವಿಭಾಗೀಯ ಅಧಿಕಾರಿಗಳಿಗೆ ಅಗತ್ಯ ಸಹಕಾರ ಮತ್ತು ಸೌಲಭ್ಯಗಳನ್ನು ಒದಗಿಸಲು ಸೂಚಿಸಿದೆ.

(ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.)

ಜಂಟಿ ನಿರ್ದೇಶಕರು(ಆಡಳಿತ ಹಾಗೂ ಮಾನ್ಯತೆ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಸೂಕ್ತ ಕ್ರಮಕ್ಕಾಗಿ

1. ಸಂಬಂಧ ಪಟ್ಟ ಜಿಲ್ಲಾ ಉಪನಿರ್ದೇಶಕರು
2. ಸಂಬಂಧ ಪಟ್ಟ ಪ್ರಾಂಶುಪಾಲರು

<u>ಪ್ರತಿಗಳು:</u>

1. ಪ್ರಾಂತೀಯ ನಿರ್ದೇಶಕರು, ಎನ್.ಎಸ್.ಎಸ್ ಪ್ರಾಂತೀಯ ಕೇಂದ್ರ, ಭಾರತ ಸರ್ಕಾರ, ಆರ್.ವಿ. ರಸ್ತೆ ಬೆಂಗಳೂರು.
2. ರಾಜ್ಯ ಸಂಪರ್ಕಾಧಿಕಾರಿಗಳು ಹಾಗೂ ಪದ ನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ರಾಷ್ಟ್ರೀಯ ಸೇವಾ ಯೋಜನೆ, ಯುವಜನ ಸೇವಾ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು.
3. ರಾಷ್ಟ್ರೀಯ ಸೇವಾ ಯೋಜನಾ ಘಟಕ ಹೊಂದಿರುವ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳ ಸೂಕ್ತ ಕ್ರಮಕ್ಕಾಗಿ.
4. ಜಂಟಿ ನಿರ್ದೇಶಕರು/ಆಡಳಿತ ಮತ್ತು ಮಾನ್ಯತೆ, ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು-12
5. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳ ಮಾಹಿತಿಗಾಗಿ
6. ವಿಭಾಗೀಯ ಮಟ್ಟದ ಅಧಿಕಾರಿಗಳು
7. ಲೆಕ್ಕಾಧಿಕಾರಿಗಳು ಲೆಕ್ಕ ಪತ್ರ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು-12
8. ನಿರ್ದೇಶಕರ ಆಪ್ತ ಶಾಖೆ
9. ಕಛೇರಿ